ಮೂಲ ದಾವಾ ನಂಃ 107/2020

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **10.12.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎನ್.ಎಸ್. ವಕೀಲರಿಂದಃ**

ನಾವು ಮೂಲತಃ ಮುಗ್ವಾ ಗ್ರಾಮದವರು. ಈಗಲೂ ಮುಗ್ವಾ ಗ್ರಾಮದಲ್ಲಿ ನಮ್ಮ ಕುಟುಂಬದ ಆಸ್ತಿ ಇರುತ್ತದೆ. ನಾನು ಈಗ ನನ್ನ ಕುಟುಂಬದ ಜೊತೆ (ನನ್ನ ಹೆಂಡತಿ, ಮಕ್ಕಳು ಹಾಗೂ ತಾಯಿ) ಹೊನ್ನಾವರದ ಪ್ರಭಾತನಗರದಲ್ಲಿ ವಾಸವಾಗಿದ್ದೇನೆ. ಮುಗ್ವಾ ಗ್ರಾಮದಲ್ಲಿ ಸಣ್ಣ ಮನೆ ಇದ್ದು, ಈಗ ಅಲ್ಲಿ ಯಾರೂ ವಾಸವಿರುವುದಿಲ್ಲ. ನಾನು ಸುಮಾರು 18 ವರ್ಷಗಳಿಂದ ಪ್ರಭಾತನಗರದಲ್ಲಿ ವಾಸವಾಗಿದ್ದೇನೆ.

ದಾವಾಸ್ತಿಯನ್ನು ಖರೀದಿ ಮಾಡಿದ ವರ್ಷ ನನಗೆ ಈಗ ನೆನಪಿಗೆ ಬರುತ್ತಿಲ್ಲ. ನಾನು ದಾವಾಸ್ತಿಯಲ್ಲಿ 2006 ನೇ ಸಾಲಿನಲ್ಲಿ ಮನೆಯನ್ನು ಕಟ್ಟಿದ್ದೇನೆ. ನಾನು ದಾವಾ ಸ್ಥಳವನ್ನು KHB ಸಂಸ್ಥೆಯಿಂದ ಖರೀದಿ ಮಾಡಿದ್ದೇನೆ. ನಾನು ಮನೆಯನ್ನು ಕಟ್ಟುವ ಕಾಲಕ್ಕೆ ಯೋಜನೆಯನ್ನು (ಪ್ಲಾನ್) ಪಡೆದುಕೊಂಡಿದ್ದೇನೆ. ಸದ್ರಿ ಯೋಜನೆಯನ್ನು ಎಂಜಿನೀಯರ್ ರವರಾದ ದತ್ತಾತ್ರೇಯ ಗೌಡರವರು ನೀಡಿದ್ದರು. ನಾನು ಆ ಸಂದರ್ಭದಲ್ಲಿ ಪಡೆದುಕೊಂಡ ಅಪ್ರುವಲ್ ಪ್ರತಿ ನನ್ನ ಹತ್ತಿರ ಇರುತ್ತದೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.